ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ
ನ್ಯಾಯಾಲಯ,ಯಾದಗಿರಿ.

**PCR No. 70/2025**
**PW : 1**

ದಿನಾಂಕಃ **04-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ನಾಗರತ್ನ |
| ತಂದೆ/ಗಂಡನ ಹೆಸರುಃ | ರೇವಣಸಿದ್ದಪ್ಪ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ಯಾದಗಿರಿ ಸ್ಟೇಷನ ಏರಿಯಾ |

ಮುಖ್ಯ ವಿಚಾರಣೆ ಫಿರ್ಯಾದಿದಾರರ ಪರವಾಗಿಃ ಶ್ರೀ ಎಚ್, ಎಮ್, ಪಿ ವಕೀಲರಿಂದಃ

1. ನನಗೆ ಆರೋಪಿತನ ಪರಿಚಯವಿದೆ. ಆರೊಪಿತನು ನನ್ನ ಗಂಡನ ತಮ್ಮನಾಗಬೇಕು. ಸನಃ 2004 ರಲ್ಲಿ ಬಸವ ಶಿಕ್ಷಣ ಮತ್ತು ಸಾಮಾಜಿಕ ಸಂಸ್ಥೆಯನ್ನು ಪ್ರಾರಂಭ ಮಾಡಿರುತ್ತೇವೆ. ಸದರಿ ಸಂಸ್ಥೆಯಲ್ಲಿ 5 ಜನ ಸದಸ್ಯರಿದ್ದೇವು. ಸದರಿ ನನ್ನ ಗಂಡ ಈ ಸಂಸ್ಥೆಯನ್ನು ಪ್ರಾರಂಭಿಸಿರುತ್ತಾರೆ. ನನ್ನ ಮಾವ ಪ್ರಭು ಕುಪ್ಪಿ ಇವರು ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ. ನಾನು ಉಪಾಧ್ಯಕ್ಷಳಾಗಿರುತ್ತೇನೆ.ಆರೋಪಿತನು ಸೆಕೆರಟರಿ ಆಗಿರುತ್ತಾರೆ. ಸೋಮನಾಥರೆಡ್ಡಿ ಇವರು ಖಜಾಂಜಿ ಇದ್ದರು. ಲಿಂಗರಾಜ ಇವರು ಟ್ರಸ್ಟಿ ಇದ್ದರು. ಪ್ರಭು ಕುಪ್ಪಿ ಇವರು ದಿನಾಂಕಃ 24-09-2024 ರಂದು ಮರಣ ಹೊಂದಿರುತ್ತಾರೆ. ಸೋಮನಾಥರೆಡ್ಡಿ ಇವರು ಕೂಡ ದಿನಾಂಕಃ 24-07-2021 ರಂದು ಮರಣ ಹೊಂದಿರುತ್ತಾರೆ.

2. ಸದರಿ ಬಸವ ಸಂಸ್ಥೆ ಇದು ಮುಂಡರಗಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ನಾನು ಸಂಸ್ಥೆಗೆ ಜಾಗವನ್ನು ಸನಃ 2014 ರಲ್ಲಿ ದಾನವಾಗಿ ನೀಡಿರುತ್ತೇನೆ. ಸದರಿ ಬಸವ ಸಂಸ್ಥೆ ಇದು ಯಾದಗಿರಿ ಗ್ರಾಮೀಣ ಪೊಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆ. ಬಸವ ಸಂಸ್ಥೆ ಅಡಿಯಲ್ಲಿ ಪ್ಯಾರಾಮೇಡಿಕಲ್ ಬಸವ ಸಂಸ್ಥೆಯ ಮತ್ತು ಡಿ.ಫಾರ್ಮಸಿ ಕಾಲೇಜಗಳನ್ನು ನಡೆಸುತ್ತೇವೆ. ಸದರಿ ಸಂಸ್ಥಯೆ ಹಣದ ವ್ಯವಹಾರಗಳನ್ನು2 ಅಕೌಂಟಗಳು ಮೂಲಕ ನೋಡಿಕೊಳ್ಳುತ್ತಿದ್ದೇವೆ. ಸದರಿ ಕರೆಂಟ್ ಅಕೌಂಟ್ ನನ್ನ ಮತ್ತು ಸೆಕರೆಟರಿ ಹೆಸರಿನಲ್ಲಿ ಹೆಸರಿನಲ್ಲಿ ಜಂಟಿಯಾಗಿತ್ತು. ಸದರಿ ಕಾಲೇಜ ಫೀ. ಮತ್ತು ವೇತನವನ್ನು ನಮ್ಮ ಅಕೌಂಟನಲ್ಲಿ ನೋಡಿಕೊಳ್ಳುತ್ತಿದ್ದೇವು. ಇನ್ನೊಂದು ಅಕೌಂಟ್ ಪ್ರಿನ್ಸಿಪಲ್ ಮತ್ತು ಸೆಕರೆಟರಿ ಇವರ ಹೆಸರಿನಲ್ಲಿ ಪರೀಕ್ಷೆ ಶುಲ್ಕ ಮತ್ತು ಶಿಷ್ಯ ವೇತನವನ್ನು ನೋಡಿಕೊಳ್ಳುತ್ತಿದ್ದೇವು. ಎರಡೂ ಅಕೌಂಟ್ ಗಳು ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಂಬಂದಪಟ್ಟಿರುತ್ತದೆ.

3. ಸದರಿ ನನ್ನ ಗಂಡ ಕಾಲೇಜ ಮತ್ತು ಇತರ ವ್ಯವಹಾರಗಳಿಗೆ ಸಹಾಯ ಮಾಡಿರುತ್ತಾರೆ ನಂತರ ನಾವು ಯುನಿಯನ್ ಬ್ಯಾಂಕಿನಿಂದ 5.65 ಕೋಟಿ ರೂ. ನನ್ನ ಗಂಡ ಮನೆಯನ್ನು ಗೇಣಿ ಇಟ್ಟು ಸಾಲವನ್ನು ಪಡೆದುಕೊಂಡಿರುತ್ತಾರೆ. ಸದರಿ ಶಾರದಾ ಮೆಡಿಕಲ್ ಕಾಲೇಜಗೆ ಪ್ರಿನ್ಸಿಪಲ್ ಆಗಿ ರಾಹುಲ ಕುಲಕರ್ಣಿ ಇವರಿಗೆ ನೇಮಕ ಮಾಡಿರುತ್ತೇವೆ. ಸೋಮನಾಥ ರೆಡ್ಡಿ ಮರಣ ಹೊಂದಿದ ನಂತರ ಆರೋಪಿತನು ಕಾಲೇಜನಲ್ಲಿ ಹಣವನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳುವುದು, ನಮ್ಮ ಅಕೌಂಟ್ ಗೆ ಕಾಲೇಜ ಫೀ ಹಾಕಬೇಡಿ ನಗದು ಹಣ ನೀಡಬೇಕು ಎಂದು ಹೇಳಿರುತ್ತಾನೆ. ಸದರಿ ನಮಗೆ ಯಾರಿಗೂ ಕರೆಯದೇ ಕಾಲೇಜನಲ್ಲಿ ಮೀಟಿಂಗ್ ಮತ್ತು ನಿರ್ಣಯಗಳನ್ನು ಮಾಡುತ್ತಿದ್ದನು. ಆರೋಪಿತನು ಮೊದಲು ಸೆಕರೆಟರಿ

ಎಂದು ಕೆಲಸ ಮಾಡುತ್ತಿದ್ದನು. ನಂತರ ತಾನು ಪ್ರಿನ್ಸಿಪಲ್ ಆಗಿ ಕಾರ್ಯವನ್ನು ನಿರ್ವಹಿಸಲು ಪ್ರಾರಂಭ ಮಾಡಿರುತ್ತಾನೆ.

4. ಸದರಿ ನಮ್ಮ ಸಂಸ್ಥೆಯ ನಿಯಮದ ಪ್ರಕಾರ ಯಾವುದೇ ಲಾಭದಾಯಕ ಹುದ್ದೆಯನ್ನು ಅಲಂಕರಿಸಬಾರದು ಎಂದು ಇರುತ್ತದೆ ಎಂದರೆ ಸರಿ. ಸದರಿ ಆರೋಪಿತನು ಪ್ರಿನ್ಸಿಪಲ್ ಆಗಿ ವೇತನವನ್ನು ಪಡೆದುಕೊಳ್ಳುತಿದ್ದನು. ಸನಃ 2022 ರಲ್ಲಿ ಆರೋಪಿತನು ನಮ್ಮ ಅಕೌಂಟ್ ಗಳ ಮೂಲಕ ವೇತನ್ನು ಮಾಡುವುದು ಬಿಟ್ಟಿರುತ್ತಾನೆ. ಸದರಿ ವ್ಯವಹಾರಗಳು ನಮ್ಮ ಗಮನಕ್ಕೆ ಬಂದಾಗ ಯುನಿಯನ್ ಬ್ಯಾಂಕ್‌ಗೆ ದೂರನ್ನು ಸಲ್ಲಿಸಿರುತ್ತೇವೆ. ಸದರಿ ಯುನಿಯನ್ ಬ್ಯಾಂಕಿನಲ್ಲಿ ಆರೋಪಿತನು ನಾನೇ ಪ್ರಿನ್ಸಿಪಲ್ ಇರುತ್ತೇನೆ ಎಂದು ಹೇಳಿ ಸಂಸ್ಥೆಯ ಗೊತ್ತುವಳಿಯನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಸದರಿ ಸಂಸ್ಥೆಯ ಗೊತ್ತುವಳಿಯನ್ನು ಅಧ್ಯಕ್ಷರ ಹೆಸರಿನಲ್ಲಿ ಪಾಸ್ ಮಾಡಿರುತ್ತಾರೆ. ಸದರಿ ಗೊತ್ತುವಳಿಯಲ್ಲಿ ಲಿಂಗರಾಜ ಮತ್ತು ಪ್ರಭು ಕುಪ್ಪಿ ಇವರ ಹೆಸರು ಇರುತ್ತದೆ. ಸದರಿ ಗೊತ್ತುವಳಿ ಮಾಡಿದಾಗ ಪ್ರಭು ಕುಪ್ಪಿ ಇವರಿಗೆ ಆರೋಗ್ಯ ಸರಿ ಇರಲಿಲ್ಲ. ಸದರಿ ಗೊತ್ತುವಳಿಯಲ್ಲಿ ಸಹಿ ಪ್ರಭು ಕುಪ್ಪಿ ಇವರದ್ದು ಇರಲಿಲ್ಲ. ಸದರಿ ಪ್ರಭು ಕುಪ್ಪಿ ಇವರ ಸಹಿ ಇರುವುದಿಲ್ಲ ಎಂದು ನಾನು ಬೇರೆ ದಾಖಲಾತಿಗಳನ್ನು ನೋಡಿರುತ್ತೇನೆ.

5. ಯುನಿಯನ್ ಬ್ಯಾಂಕಿನವರು ಸದರಿ ಕಾನೂನು ಸಲಹೆಯನ್ನು ಪಡೆದುಕೊಂಡು ಎಲ್ಲಾ ಸದಸ್ಯರು ಬ್ಯಾಂಕಿಗೆ ಬಂದು ನಮ್ಮ ಸಮಕ್ಷಮದಲ್ಲಿ ಸಹಿ ಮಾಡಲು ನಮಗೆ ನಿರ್ದೇಶನ ನೀಡಿರುತ್ತಾರೆ. ಸದರಿ ಆರೋಪಿತನು ಹೈ ಕೋರ್ಟಗೆ ರಿಟ್ ಪೆಟಿಷನ್ ಹಾಕಿರುತ್ತಾನೆ. ಸದರಿ ಬ್ಯಾಂಕಿನವರು ಅಕೌಂಟನ್ನು ಸ್ಥಗಿತ

ಮಡಿದ್ದರಿಂದ ಶಿಕ್ಷಕರಿಗೆ ವೇತನ ಇರುವುದಿಲ್ಲ ಎಂದು ರಿಟ್ ಪೆಟಿಷನ ಹಾಕಿರುತ್ತಾನೆ. ಆದರೆ ವೇತನದ ಅಕೌಂಟ್ ಸ್ಥಗಿತ ಆಗಿರುವುದಿಲ್ಲ. ಸದರಿ ರಿಟ್ ಪೆಟಿಷನಲ್ಲಿ ಅಧ್ಯಕ್ಷ ಮತ್ತು ಯುನಿಯನ್ ಬ್ಯಾಂಕ್ ರವರಿಗೆ ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ನನಗೆ ಯುನಿಯನ್ ಬ್ಯಾಂಕಿನವರು ಮಾಹಿತಿ ನೀಡಿರುತ್ತಾರೆ. ನಾನು ಸದರಿ ರಿಟ್ ಪೆಟಿಷನಲ್ಲಿ ಸೇರ್ಪಡೆ ಆಗಿರುತ್ತೇನೆ. ಮಾನ್ಯ ಉಚ್ಚ ನ್ಯಾಯಾಲಯವು ವೇತನ ಸಲುವಾಗಿ ಅಕೌಂಟನ್ನು ಸ್ಥಗಿತವಾಗಿರುವುದನ್ನು ತೆಗೆಯಲು ನಿರ್ದೇಶನ ನೀಡಿರುತ್ತಾರೆ. ಸದರಿ ಆರೋಪಿತನು ಗೊತ್ತುವಳಿ ಮೋಸದಿಂದ ಸೃಷ್ಟಿ ಮಾಡಿರುತ್ತಾನೆ. ಸದರಿ ಶಿಕ್ಷಕರು ಹೆಚ್ಚು ಇರುತ್ತಾರೆ ಎಂದು ಅವರ ಹೆಸರಿನಿಂದ ವೇತನವನ್ನು ಮೋಸದಿಂದ ಪಡೆದುಕೊಂಡಿರುತ್ತಾನೆ. 5 ರಿಂದ 6 ಜನರ ಶಿಕ್ಷಕರ ವೇತನವನ್ನು ಪಡೆದುಕೊಂಡಿರುತ್ತಾನೆ. ಸದರಿ ಪ್ರಭು ಕುಪ್ಪಿ ಇವರ ಹೆಸರಿನಲ್ಲಿ ಪ್ರಮಾಣ ಪತ್ರವನ್ನು ಸೃಷ್ಟಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾನೆ.

6. ಸದರಿ ಮಾನ್ಯ ಉಚ್ಚ ನ್ಯಾಯಾಲಯವು ಸೆಕರೆಟರಿ, ಪ್ರಿನ್ಸಿಪಲ್ ಆಗಿ ವೇತನ್ನು ಪಡೆದುಕೊಳ್ಳಲು ಬರುವುದಿಲ್ಲ ಎಂದು ವೇತನವನ್ನು ಸ್ಥಗಿತ ಮಾಡಿರುತ್ತಾರೆ. ಸದರಿ ಪ್ರಿನ್ಸಿಪಲ್ ಆಗಿ ಆರೋಪಿತನು ವಿದ್ಯಾರ್ಥಿಗಳಿಗೆ ಕಿರುಕುಳ ನೀಡಿರುತ್ತಾನೆ ಮತ್ತು ಬೆದರಿಕೆ ಹಾಕಿರುತ್ತಾನೆ. ಆರೋಪಿತನು 14 ರಿಂದ 15 ಕೋಟಿ ನಮ್ಮ ಟ್ರಸ್ಟಿಗೆ ಮೋಸ ಮಾಡಿರುತ್ತಾನೆ. ನಾನು ಯಾದಗಿರಿ (ಗ್ರಾ) ಪೊಲಿಸ ಠಾಣೆಗೆ ದಿನಾಂಕಃ 20-02-2025 ರಂದು ದೂರನ್ನು ಸಲ್ಲಿಸಿರುತ್ತೇನೆ ಮತ್ತು ಎಸ್.ಪಿ ಯಾದಗಿರಿ ಇವರಿಗೆ ದೂರನ್ನು ಸಲ್ಲಿಸಿರುತ್ತೇನೆ. ಆರೋಪಿತನು ಸ್ವಂತ ಮನೆಯಲ್ಲಿಯೇ ಕಾಲೇಜನ್ನು ಮಾಡಿಕೊಂಡಿರುತ್ತಾನೆ. ಪೊಲಿಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಿನಾಂಕಃ 27-09-2025 ರಂದು ಮತ್ತೊಂದು ಸಲ ದೂರನ್ನು ಸಲ್ಲಿಸಿರುತ್ತೇನೆ. ಆರೋಪಿತನು ಎಲ್ಲಾ ಮಹತ್ವದ ದಾಖಲಾತಿಗಳನ್ನು

ವಿಜಯಪೂರಕ್ಕೆ ತೆಗೆದುಕೊಂಡು ಹೋಗಿರುತ್ತಾನೆ. ಸದರಿ ಆರೋಪಿತನಿಗೆ ಪೊಲಿಸರು ಕರೆಸಿರುತ್ತಾರೆ. ಸದರಿ ಆರೋಪಿತನ ವಿರುದ್ದ ಕಾನೂನು ಕ್ರಮ ತೆಗೆದುಕೊಳ್ಳಲು ಕೇಳುತ್ತೇನೆ. ಆರೋಪಿತನು ಮೋಸದಿಂದ ಸಹಿಗಳನ್ನು ಸೃಷ್ಟಿ ಮಾಡಿ ಸುಳ್ಳು ದಾಖಲಾತಿಯನ್ನು ಸೃಷ್ಟಿ ಮಾಡಿರುತ್ತಾನೆ. ಆರೋಪಿತನಿಂದ ನಮ್ಮ ಸಂಸ್ಥೆಗೆ ಬಹಳ ನಷ್ಟವಾಗಿರುತ್ತದೆ.

7. ಟ್ರಸ್ಟ ಡಿಡ್ ನಿಪಿ-1, ತಿದ್ದು ಪಡೆ ಟ್ರಸ್ಟ ಡಿಡ್ ನ್ನು ನಿಪಿ-2, ಡಬ್ಲೂ-ಪಿ ನಂಬರ 2022175 ನೇದ್ದರ ಅರ್ಜಿಯ ಪ್ರಮಾಣ ಪತ್ರ, ತಕರಾರು ಅರ್ಜಿ ಮತ್ತು ಇತರ ದಾಖಲಾತಿಗಳನ್ನು ನಿಪಿ-3 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಡಬ್ಲೂ-ಪಿ ನಂಬರ 200241/2025 ರ ಪೆಟಿಷನ ಅರ್ಜಿಯನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಪೊಲಿಸ ಸ್ವಿಕೃತಿಯನ್ನು ನಿಪಿ-12, ದೂರನ್ನು ನಿಪಿ-13, ಪೊಲಿಸ ನೋಟಿಸನ್ನು ನಿಪಿ-14, ಎಸ್.ಪಿ ದೂರನ್ನು ನಿಪಿ-15, ಟ್ರಸ್ಟ ಬೊರ್ಡ ಗೊತ್ತುವಳಿ ನಿಪಿ-16, ದೂರನ್ನು ನಿಪಿ-17 ಎಂದು ಗುರುತಿಸಲಾಯಿತು.

**ಪಿರ್ಯಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ